# ಜೀವದಯೆ

## ಅ. ಬಿಟ್ಟಸ್ಥಳ ತುಂಬಿರಿ. (Fill in the blanks)

೧. ರಂಗ ಮತ್ತು ಸಾಧಿಕ್ ಇಬ್ಬರೂ ಜೀವದ ಗೆಳೆಯರು.

೨. ಅಜ್ಜಿ ಒಣ ಕಟ್ಟಿಗೆಗಳನ್ನು ಆರಿಸುತ್ತಿದ್ದರು.

೩. ರಂಗ ಅಜ್ಜಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದನು.

೪. ಹಾವನ್ನು ಕೊಲ್ಲುವ ಹಕ್ಕು ನಮಗಿಲ್ಲ.

## ಆ. ಈ ಮಾತುಗಳನ್ನು ಯಾರು ಯಾರಿಗೆ ಹೇಳಿದರು? (Who told to whom)

೧. "ತಲೆ ಕೆಟ್ಟಿದೆಯೇನೋ ನಿಂಗೆ."

ಉ: ರಂಗ ಸಾಧಿಕನಿಗೆ ಹೇಳಿದನು.

೨. 'ಅಜ್ಜಿಗೆ ಕಚ್ಚಿರುವ ಹಾವು ವಿಷದ ಹಾವಲ್ಲ'.

ಉ: ವೈದ್ಯ ರಂಗನಿಗೆ ಹೇಳಿದನು.

೩. 'ಇನ್ನು ಮುಂದೆ ಹೀಗೆ ಮಾಡುವುದಿಲ್ಲ'.

ಉ: ಸಾಧಿಕ ರಂಗನಿಗೆ ಹೇಳಿದನು.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

## ಇ. ಒಂದು ವಾಕ್ಯದಲ್ಲಿ ಉತ್ತರಿಸಿರಿ. (Answer the following in one sentence)

೧. ರಂಗ ಮತ್ತು ಸಾಧಿಕ್ ದಿನಾಲು ಯಾವುದರಲ್ಲಿ ಶಾಲೆಗೆ ಹೋಗುತ್ತಿದ್ದರು?

ಉ: ರಂಗ ಮತ್ತು ಸಾಧಿಕ್ ದಿನಾಲು ಸೈಕಲ್ ನಲ್ಲಿ ಶಾಲೆಗೆ ಹೋಗುತ್ತಿದ್ದರು.

೨. ನೇರಳೆ ಮರವನ್ನು ಹತ್ತಿದವರು ಯಾರು?

ಉ: ನೇರಳೆ ಮರವನ್ನು ಹತ್ತಿದವರು ರಂಗ.

೩. ಅಜ್ಜಿ ಕೂಗಿಕೊಂಡಿದ್ದು ಯಾಕೆ?

ಉ: ಅಜ್ಜಿ ಕೂಗಿಕೊಂಡಿದ್ದು ಹಾವು ಕಚ್ಚಿದ್ದಕ್ಕೆ.

೪. ವೈದ್ಯರು ರಂಗನ ಬಳಿ ಏನೆಂದು ಹೇಳಿದರು?

ಉ: ವೈದ್ಯರು ರಂಗನ ಬಳಿ ಅಜ್ಜಿಗೆ ಕಚ್ಚಿದ ಹಾವು ವಿಷದ ಹಾವಲ್ಲ ಎಂದು ಹೇಳಿದರು.

೫.ರಂಗ ಯಾರನ್ನು ಸಮಾಧಾನ ಪಡಿಸಿದನು?

ಉ: ರಂಗ ಸಾಧಿಕನನ್ನು ಸಮಾಧಾನ ಪಡಿಸಿದನು.

**ಈ. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. (Answer the following in two-three sentence)**

೧.ಪೊದೆಯಲ್ಲಿದ್ದ ಹಾವನ್ನು ಕಂಡ ಸಾಧಿಕ್ ರಂಗನಿಗೆ ಏನೆಂದನು?

ಉ: ಹಾವನ್ನು ಕಂಡ ಸಾಧಿಕ್ ರಂಗನಿಗೆ ತಲೆಕೆಟ್ಟಿದೆ ಏನು ನಿನಗೆ ಎಂದನು.

೨.ಕೋಪಗೊಂಡಿದ್ದ ಸಾಧಿಕ್ ನನ್ನು ರಂಗ ಹೇಗೆ ಸಮಾಧಾನಪಡಿಸಿದನು?

ಉ: ಕೋಪಗೊಂಡಿದ್ದ ಸಾಧಿಕ್ ನನ್ನು ರಂಗ "ನೋಡು ಸಾಧಿಕ್ ಹಾವನ್ನು ಸಾಯಿಸುವುದಕ್ಕಿಂತ ಅಜ್ಜಿಯ ಪ್ರಾಣ ಉಳಿಸುವುದು ಮುಖ್ಯವಾಗಿತ್ತು" ಎಂದು ಸಮಾಧಾನ ಪಡಿಸಿದನು.

೩.ನೀವು ಯಾರಿಗಾದರೂ ಸಹಾಯ ಮಾಡಿದ್ದರೆ ಅದರ ಬಗ್ಗೆ ಬರೆಯಿರಿ.

ಉ: ನಾನು ಮಾಲಿಗೆ ನೀರು ಕೊಟ್ಟೆ.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

**ಉ. ಸ್ವಂತ ವಾಕ್ಯ ರಚಿಸಿರಿ.** (Make your own sentence)

೧.ಜೋಪಾನ: ಮರ ಹತ್ತುವಾಗ ಜೋಪಾನವಾಗಿ ಇರಬೇಕು

೨.ಸಮಾಧಾನ: ನಾವು ಎಲ್ಲರೊಂದಿಗೆ ಸಮಾಧಾನವಾಗಿ ಇರಬೇಕು.

೩. ತಪ್ಪು : ನಮ್ಮ ತಪ್ಪನ್ನು ತಿದ್ದಿಕೊಳ್ಳಬೇಕು.